

ಹಾವಿನ ಮಗಳು ಮದುವೆಯಾಗಿ ಸುಖದಿಂದ ಇದ್ದಳು. ಒಂದು ಮಗುವಿಗೆ ತಾಯಿಯೂ ಆದಳು. ಆದರೂ ತನ್ನ ತಾಯಿ ಯಾರೆಂಬುದನ್ನು ಆವರೆಗೂ ತಿಳಿಸಿರಲಿಲ್ಲ. ಎಷ್ಟು ಕೇಳಿದರೂ ರಹಸ್ಯವನ್ನು ಬಯಲು ಮಾಡದಿರುವುದನ್ನು ಕಂಡು ಅವಳ ಅತ್ತೆ ಅವಳಿಗೆ ಮಂಪರು ಬರುವ ಔಷಧವನ್ನು ಕುಡಿಸಿದಳು. ಇದರಿಂದ ನಿದ್ರಾವಶಳಾದ ಅವಳ ಬಾಯಿಯಿಂದ ಅವಳ ಪೂರ್ವಾಪರ ಕೇಳಿ ತಿಳಿದುಕೊಂಡಳು. ಆಗ ಅತ್ತೆಗೆ ಇವಳ ಹಾವು ತಾಯಿಯ ಬಳಿ ಅಗಣಿತವಾದ ನಿಧಿ ಇರಬಹುದು, ಅದನ್ನು ಹೇಗಾದರೂ ವಶಪಡಿಸಿಕೊಳ್ಳಬೇಕೆಂಬ ಯೋಚನೆ ಬಂತು. ಮಗನನ್ನು ಕರೆದು ಈ ವಿಷಯ ಹೇಳಿದಳು. ಇಬ್ಬರೂ ಉಪಾಯವೊಂದನ್ನು ರೂಪಿಸಿದರು. ಅದರಂತೆ ಆತ ಹೆಂಡತಿಯನ್ನು ಕರೆದುಕೊಂಡು ಅವಳ ತವರಾದ ಹಾವಿನ ಬಿಲಕ್ಕೆ ಹೋದ.

ಅವಳಿಗೂ ತಾಯಿಯನ್ನು ನೋಡುವ ಆಶೆ ಇತ್ತು. ಹಾಗಾಗಿ ಗಂಡನ ಮಾತು ನಂಬಿ ಅವನನ್ನು ಕರೆದುಕೊಂಡು ತಾಯಿಯ ಬಿಲಕ್ಕೆ ಹೋದಳು. ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಯೋಜಿಸಿದ ಗಂಡ, ‘ಇವತ್ತು ನಿನ್ನ ತಾಯಿಯ ಬಳಿ ಇದ್ದು ನಾಳೆ ಹೋಗೋಣ’ ಎಂದ. ತಾಯಿ–ಮಗಳು ಸಂತೋಷದಿಂದ ಒಪ್ಪಿದರು. ಐಶ್ವರ್ಯವನ್ನು ದೋಚಲು ಮುಂದಾದ ಅಳಿಯ ರಾತ್ರಿ ಹಾವಿನ ಕತ್ತು ಸೀಳಿದ. ಹಾವು ಪ್ರಾಣ ವೇದನೆಯಿಂದ, ‘ನನ್ನನ್ನು ವಿನಾಕಾರಣ ಯಾಕೆ ಕೊಲ್ಲುತ್ತಿರುವೆ?’ ಎಂದು ಕೇಳಿತು. ‘ನಿನ್ನಲ್ಲಿರುವ ಅಗಣಿತ ನಿಧಿ ನನಗೆ ಬೇಕು’ ಎಂದ ತರುಣ. ‘ಅಯ್ಯೋ ಮರುಳೇ, ನನ್ನಲ್ಲಿರುವ ಎಲ್ಲವನ್ನೂ ನಿನ್ನ ಹೆಂಡತಿಯ ಕೈಗೆ ಕೊಟ್ಟು ಕಳುಹಿಸಿದ್ದೆ. ವೃಥಾ ನನ್ನ ಜೀವಹರಣ ಮಾಡಿದೆ. ಇನ್ನು ಚಿಂತಿಸಿ ಫಲವಿಲ್ಲ. ನಾನು ಸತ್ತ ಮೇಲೆ ನನ್ನ ತಲೆಯನ್ನು ತೆಗೆದುಕೊಂಡು ಹೋಗಿ ಹೊಂಡದಲ್ಲಿ ಹೂಳಿ ದಿನವೂ ನೀರು ಹಾಕುತ್ತ ಇರು. ನಿಮಗೆ ಚಿನ್ನಕ್ಕಿಂತಲೂ ಮಿಗಿಲಾದ ವಸ್ತುವೊಂದು ನಿರಂತರವಾಗಿ ಸಿಗುತ್ತದೆ’ ಎಂದು ತಿಳಿಸಿ ಹಾವು ಸತ್ತುಹೋಯಿತು.

ತರುಣ ಹಾವಿನ ತಲೆಯನ್ನು ತಂದು ಹೊಂಡದಲ್ಲಿ ಹೂಳಿ ದಿನವೂ ನೀರೆರೆದು ಪೋಷಿಸಿದ. ಅಲ್ಲಿ ಒಂದು ಗಿಡ ಹುಟ್ಟಿ ಮರವಾಗಿ ಬೆಳೆಯಿತು. ದುಂಡಗಿನ ಕಾಯಿಗಳಿದ್ದ ಗೊನೆಗಳನ್ನು ಬಿಟ್ಟಿತು. ಮೊದಲ ಕಾಯಿ ಬಿಟ್ಟಾಗ ಜನ ಎಳನೀರು ಕುಡಿದು, ತೆಂಗಿನಕಾಯಿಗಳನ್ನು ತಿಂದು ಖುಷಿಪಟ್ಟರು. ಹಾವಿನಂತೆ ಮೈಯಿದ್ದ ಮರವನ್ನು ಊರಿನವರು ತೆಂಗಿನಮರವೆಂದು ಕರೆದರು. ಅಪಕಾರ ಮಾಡಿದವರಿಗೂ ಉಪಕಾರ ಮಾಡಿದ ಹಾವು ಈ ಮರವಾಗಿ ಜನಿಸಿತೆಂದು ಕಥೆ ಹೇಳಿದರು. ●